**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.17/2020
ಪಿ.ಡಬ್ಲೂ.01
ಸಿ.ಡಬ್ಲೂ.06

ಸಾಕ್ಷಿದಾರರ ಹೆಸರು : ಅಶೋಕ ತಳವಾರ.

ತಂದೆಯ ಹೆಸರು : ಭೀಮಪ್ಪ.

ವಯಸ್ಸು : 43 ವರ್ಷ.

ಉದ್ಯೋಗ : ಒಕ್ಕಲುತನ.

ವಾಸಸ್ಥಳ : ಗಲಗಲಿ, ತಾಃ ಬೀಳಗಿ.

**ಇಂದು ದಿನಾಂಕ 30-03-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

1) ನನಗೆ ಸಹಿ ಮಾಡಲು ಬರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯು ಶವ ಪಂಚನಾಮೆಯಾಗಿದ್ದು, ಅದನ್ನು ನಿಪಿ-1 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

2) ಈಗ 2-3 ವರ್ಷಗಳ ಹಿಂದೆ ಒಂದು ದಿನ ನಾನು ಗಲಗಲಿಯ ಸರಕಾರಿ ಆಸ್ಪತ್ರೆಗೆ ನಮಗೆ ಪರಿಚಯವಿದ್ದ ನಾಗವ್ವ ಇವಳು ತೀರಿಕೊಂಡಿದ್ದರಿಂದ ಅವಳನ್ನು ನೋಡಲು ಹೋಗಿದ್ದೆನು. ಆಗ ಪೋಲೀಸರು ನಾನು ಸಹಿ ಮಾಡಿದ ನಿಪಿ-1 ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಮತ್ತು ಒಂದು ಪೋಟೋವನ್ನು ಸಹ ತೆಗೆದುಕೊಂಡಿರುತ್ತಾರೆ.

3) ಪೋಲೀಸರು ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆಯನ್ನು

ಮಾಡಿರುವುದಿಲ್ಲ ಮತ್ತು ಯಾವುದೇ ಶವ ಪಂಚನಾಮೆ ಕಾಲಕ್ಕೆ ನಾನು ಯಾವುದೇ ಶವದ ಗಾಯಗಳನ್ನು ನೋಡಿ ಗುರುತಿಸಿರುವುದಿಲ್ಲ.

**4)** ನಾನು ಸಹಿ ಮಾಡಿದ ನಿಪಿ-**1** ಶವ ಪಂಚನಾಮೆಯಲ್ಲಿ ಪೋಲೀಸರು ಏನು ಬರೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ ಮತ್ತು ಅದರಲ್ಲಿರುವ ವಿಷಯಗಳನ್ನು ನನಗೆ ಓದಿ ಹೇಳಿರುವುದಿಲ್ಲ.

**5)** ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಇರುವಿಕೆಯನ್ನು ನೋಡಿ ಗುರುತಿಸುತ್ತಾರೆ. ಸದರಿ ಪೋಟೋವನ್ನು ನಿಪಿ-**2** ಎಂದು ಗುರುತಿಸಲಾಯಿತು. ಸದರಿ ಪೋಟೋವನ್ನು ಪೋಲೀಸರು ಎಲ್ಲಿ, ಯಾವಾಗ ಮತ್ತು ಯಾವ ವಿಚಾರಕ್ಕಾಗಿ ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ.

**6)** ನಿಪಿ-**2** ಪೋಟೋದಲ್ಲಿ ನನ್ನ ಪಕ್ಕದಲ್ಲಿ ನಿಂತಿರುವ ಇಬ್ಬರು ಹೆಣ್ಣುಮಕ್ಕಳು ಯಾರು ಎಂಬುದು ನನಗೆ ಗೊತ್ತಿಲ್ಲ.

**7)** ನಿಪಿ-**2** ಪೋಟೋದಲ್ಲಿ ಕಂಡುಬರುವ ಶವವು ಮೃತ ನಾಗವ್ವ ಇವರದು ಆಗಿರುತ್ತದೆ.

**8)** ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯು ಮೃತ ನಾಗವ್ವಳ ಮೂರು ದಿನದ ಹಸುಗೂಸಿನ ಶವ ಪಂಚನಾಮೆಯಾಗಿದ್ದು, ಅದನ್ನು ನಿಪಿ-**3** ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-**3(ಎ)** ಎಂದು ಗುರುತಿಸಲಾಯಿತು.

**9)** ನಾನು ನಿಪಿ-**3** ದಾಖಲೆಗೆ ಯಾವಾಗ ಸಹಿ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಯಾವ ಕಾರಣಕ್ಕಾಗಿ ನನ್ನ ಸಹಿಯನ್ನು ನಿಪಿ-**3** ದಾಖಲೆಗೆ ಪಡೆದಿರುತ್ತಾರೆ ನನಗೆ ಗೊತ್ತಿಲ್ಲ.

**10)** ನನ್ನ ಸಮಕ್ಷಮ ಪೋಲೀಸರು ನಿಪಿ-**3** ರಂತೆ ಮೃತ ನಾಗವ್ವಳ ಮೃತ **03**

ದಿನದ ಹಸುಗೂಸಿನ ಶವ ಪಂಚನಾಮೆಯನ್ನು ಮಾಡಿರುವುದಿಲ್ಲ. ನಿಪಿ-3 ರಲ್ಲಿ ಪೋಲೀಸರು ಏನು ಬರೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ ಮತ್ತು ಅದರಲ್ಲಿ ಬರೆದಿರುವ ವಿಷಯಗಳನ್ನು ಪೋಲೀಸರು ನನಗೆ ಓದಿ ಹೇಳಿರುವುದಿಲ್ಲ.

11) ಸಾಕ್ಷಿಗೆ ಈಗ ಎರಡು ಪೋಟೋಗಳನ್ನು ತೋರಿಸಿದ್ದು, ಅವುಗಳಲ್ಲಿ ಒಂದು ಪೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸುತ್ತಾರೆ. ಸದರಿ ಪೋಟೋಗಳನ್ನು ಕ್ರಮವಾಗಿ ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ಪೋಟೋಗಳಲ್ಲಿ ಕಂಡುಬರುವ ಹಸುಗೂಸಿನ ಶವವು ಮೃತ ನಾಗವ್ವಳದು ಇರುತ್ತದೆ. ನಿಪಿ-4 ಮತ್ತು 5 ಪೋಟೋಗಳನ್ನು ಯಾವ ಕಾರಣಕ್ಕಾಗಿ ಪೋಲೀಸರು ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆ ವಿಷಯಗಳ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

12) ದಿನಾಂಕಃ 19-04-2020 ರಂದು ವಿಜಯಪುರದ ಮಹಿಳಾ ಪೋಲೀಸ್ ಠಾಣೆಯ ಪೋಲೀಸ್ ಇನ್ಸ್ ಪೇಕ್ಟರ್ ಇವರು ನನಗೆ ಮತ್ತು ಚಾಸಾ-7 ಗೌರವ್ವ ಕೆಂಭಾವಿ ಇವರಿಗೆ ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಯ ಶವಾಗಾರದ ಕೋಣೆಗೆ ಕರೆಸಿದ್ದು, ಅಲ್ಲಿ ಮೃತ ನಾಗವ್ವ ಗಂ. ಶಂಕರ ಇಮನದ ಇವಳ ದೇಹದ ಮೇಲೆ ಆಗಿದ್ದ ಗಾಯಗಳನ್ನು ನಮ್ಮ ಸಮಕ್ಷಮ ಪರಿಶೀಲಿಸಿ, ನಂತರ ಅವಳ ಶವದ ಪಂಚನಾಮೆಯನ್ನು ಮಧ್ಯಾಹ್ನ 1-00 ರಿಂದ 2-30 ರ ಅವಧಿಯಲ್ಲಿ ನನ್ನ ಮತ್ತು ಚಾಸಾ-7 ಇವರ ಸಮಕ್ಷಮ ನಿಪಿ-1 ರಂತೆ ಶವ ಪಂಚನಾಮೆಯನ್ನು ಜರುಗಿಸಿ, ನಿಪಿ-2 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**13)** ನಂತರ ಅದೇ ದಿನ ಮಧ್ಯಾಹ್ನ **2-45** ರಿಂದ **4-15** ಗಂಟೆವರೆಗೆ ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಯ ಶವಾಗಾರದ ಕೋಣೆಯಲ್ಲಿ ಮೃತ ನಾಗವ್ವ ಇವಳ ಮೂರು ದಿನದ ಮೃತ ಗಂಡು ಹಸುಗೂಸಿನ ಶವ ಪಂಚನಾಮೆಯನ್ನು ನನ್ನ ಮತ್ತು ಚಾಸಾ-**7** ಇವರ ಸಮಕ್ಷಮ ನಿಪಿ-**3** ರಂತೆ ಜರುಗಿಸಿ, ಅದೇ ಸಮಯಕ್ಕೆ ನಿಪಿ-**4** ಮತ್ತು **5** ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**14)** ಪೋಲೀಸರು ನನ್ನ ಹಾಗೂ ಚಾಸಾ-**7** ಗೌರವ್ವ ಇವರ ಸಮಕ್ಷಮ ನಿಪಿ-**1** ಮತ್ತು **3** ರಂತೆ ಮೃತ ನಾಗವ್ವ ಹಾಗೂ ಅವಳ ಮೃತ **03** ದಿನದ ಮಗುವಿನ ಶವ ಪಂಚನಾಮೆಗಳನ್ನು ಮಾಡಿದ್ದರೂ ಸಹ, ಆರೋಪಿಗಳಿಗೆ ಸಹಾಯ ಮಾಡಲು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್. ವಕೀಲರಿಂದ ಆರೋಪಿತರ ಪರವಾಗಿ</u>

**15)** ಮೃತ ನಾಗವ್ವಳ ತವರು ಮನೆ ಯಾವುದು ಹಾಗೂ ಗಂಡನ ಮನೆ ಯಾವುದು ಎಂದು ನನಗೆ ಹೇಳಲು ಬರುವುದಿಲ್ಲ.

**16)** ಮೃತ ನಾಗವ್ವ ಇವಳನ್ನು ನಾನು ಎಂದೂ ಮೊದಲು ನೋಡಿರುವುದೇ ಇಲ್ಲ.

**17)** ನಾನು ಸಹಿ ಮಾಡಿದ ನಿಪಿ-**1** ಹಾಗೂ ನಿಪಿ-**3** ಪಂಚನಾಮೆಗಳಲ್ಲಿ ಪೋಲೀಸರು ಏನು ಬರೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ ಎಂದರೆ ಸರಿ.

**18)** ನಾನು ಆಸ್ಪತ್ರೆಗೆ ಹೋಗುವಷ್ಟರಲ್ಲಿ ಪೋಲಿಸರು ಪಂಚನಾಮೆಗಳನ್ನು ಬರೆದಿಟ್ಟಿದ್ದರು, ನಾನು ಹೋದ ಮೇಲೆ ಅವುಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**02**
ಸಿ.ಡಬ್ಲೂ.**07**

ಸಾಕ್ಷಿದಾರರ ಹೆಸರು : ಗೌರವ್ವ ಕೆಂಭಾವಿ.

ಗಂಡನ ಹೆಸರು : ಶಿವಪ್ಪ.

ವಯಸ್ಸು : 57 ವರ್ಷ.

ಉದ್ಯೋಗ : ಕೂಲಿ ಕೆಲಸ.

ವಾಸಸ್ಥಳ : ಗಲಗಲಿ, ತಾಃ ಬೀಳಗಿ.

**ಇಂದು ದಿನಾಂಕ 30-03-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

**1)** ನನಗೆ ಸಹಿ ಮಾಡಲು ಬರುವುದಿಲ್ಲ. ನಾನು ದಾಖಲೆಗಳಿಗೆ ನನ್ನ ಎಡಗೈ ಹೆಬ್ಬಟ್ಟಿನ ಗುರುತನ್ನು ಹಾಕುತ್ತೇನೆ.

**2)** ನನ್ನನ್ನು ವಿಜಯಪುರದ ಮಹಿಳಾ ಪೋಲೀಸ್ ಠಾಣೆಯ ಅಧಿಕಾರಿಗಳು ಯಾವುದೇ ಆಸ್ಪತ್ರೆಗೆ ಕರೆಸಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆ ಮಾಡಿರುವುದಿಲ್ಲ.

**3)** ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿದ್ದು, ಅದರಲ್ಲಿರುವ ಶವವು ಮೃತ ನಾಗವ್ವಳದು ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಅದನ್ನು ನಿಪಿ-**6** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-**2** ಪೋಟೋದಲ್ಲಿರುವ ತನ್ನ ಇರುವಿಕೆಯನ್ನು ನೋಡಿ ಗುರುತಿಸುತ್ತಾರೆ.

**4)** ಮೃತ ನಾಗವ್ವ ಇವಳು ತೀರಿಕೊಂಡಿದ್ದರಿಂದ, ಅವಳನ್ನು ಈಗ ಮೂರು ವರ್ಷಗಳ ಹಿಂದೆ ಗಲಗಲಿ ಸರಕಾರಿ ಆಸ್ಪತ್ರೆಗೆ ನೋಡಲು

ಹೋಗಿದ್ದಾಗ, ಅಲ್ಲಿ ಪೋಲೀಸರು ಎರಡು ದಾಖಲೆಗಳಿಗೆ ನನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿರುತ್ತಾರೆ ಹಾಗೂ ನನ್ನನ್ನು ನಿಲ್ಲಿಸಿಕೊಂಡು ಪೋಟೋ ತೆಗೆದಿರುತ್ತಾರೆ.

**5)** ನಿಪಿ-**2** ಮತ್ತು ನಿಪಿ-**6** ಪೋಟೋಗಳನ್ನು ಪೋಲೀಸರು ಯಾವ ಕಾರಣಕ್ಕೆ ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ.

**6)** ನಾನು ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿದ ಎರಡೂ ದಾಖಲೆಗಳಲ್ಲಿ ಪೋಲೀಸರು ಏನು ಬರೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ.

**7)** ಸಾಕ್ಷಿಗೆ ನಿಪಿ-**4** ಪೋಟೋವನ್ನು ತೋರಿಸಿದ್ದು, ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸುತ್ತಾರೆ.

**8)** ಸಾಕ್ಷಿಯು ನಿಪಿ-**4** ಮತ್ತು **5** ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿರುವ ಮೃತ ಮಗುವಿನ ಶವವನ್ನು ನೋಡಿ ಗುರುತಿಸಿ, ಅದು ಮೃತ ನಾಗವ್ವ ಇವಳ ಕೂಸು ಇರುತ್ತದೆ ಎಂದು ಹೇಳುತ್ತಾರೆ. ಸದರಿ ಪೋಟೋಗಳನ್ನು ಪೋಲೀಸರು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆ ವಿಷಯಗಳ ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

**9)** ದಿನಾಂಕಃ **19-04-2020** ರಂದು ವಿಜಯಪುರದ ಮಹಿಳಾ ಪೋಲೀಸ್ ಠಾಣೆಯ ಪೋಲೀಸ್ ಇನ್ಸ ಪೇಕ್ಟರ್ ಇವರು ನನಗೆ ಮತ್ತು ಚಾಸಾ-**6** ಅಶೋಕ ತಳವಾರ ಇವರಿಗೆ ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಯ ಶವಾಗಾರದ ಕೋಣೆಗೆ ಕರೆಸಿದ್ದು, ಅಲ್ಲಿ ಮೃತ ನಾಗವ್ವ ಗಂ. ಶಂಕರ ಇಮನದ ಇವಳ ದೇಹದ ಮೇಲೆ ಆಗಿದ್ದ ಗಾಯಗಳನ್ನು ನಮ್ಮ ಸಮಕ್ಷಮ ಪರಿಶೀಲಿಸಿ, ನಂತರ

ಅವಳ ಶವದ ಪಂಚನಾಮೆಯನ್ನು ಮಧ್ಯಾಹ್ನ **1-00** ರಿಂದ **2-30** ರ ಅವಧಿಯಲ್ಲಿ ನನ್ನ ಮತ್ತು ಚಾಸಾ-**6** ಇವರ ಸಮಕ್ಷಮ ನಿಪಿ-**1** ರಂತೆ ಶವ ಪಂಚನಾಮೆಯನ್ನು ಜರುಗಿಸಿ, ನಿಪಿ-**2** ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**10)** ನಂತರ ಅದೇ ದಿನ ಮಧ್ಯಾಹ್ನ **2-45** ರಿಂದ **4-15** ಗಂಟೆವರೆಗೆ ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಯ ಶವಾಗಾರದ ಕೋಣೆಯಲ್ಲಿ ಮೃತ ನಾಗವ್ವ ಇವಳ ಮೂರು ದಿನದ ಮೃತ ಗಂಡು ಹಸುಗೂಸಿನ ಶವ ಪಂಚನಾಮೆಯನ್ನು ನನ್ನ ಮತ್ತು ಚಾಸಾ-**6** ಇವರ ಸಮಕ್ಷಮ ನಿಪಿ-**3** ರಂತೆ ಜರುಗಿಸಿ, ಅದೇ ಸಮಯಕ್ಕೆ ನಿಪಿ-**4** ಮತ್ತು **5** ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**11)** ಪೋಲೀಸರು ನನ್ನ ಹಾಗೂ ಚಾಸಾ-**6** ಅಶೋಕ ತಳವಾರ ಇವರ ಸಮಕ್ಷಮ ನಿಪಿ-**1** ಮತ್ತು **3** ರಂತೆ ಮೃತ ನಾಗವ್ವ ಹಾಗೂ ಅವಳ ಮೃತ **03** ದಿನದ ಮಗುವಿನ ಶವ ಪಂಚನಾಮೆಗಳನ್ನು ಮಾಡಿದ್ದರೂ ಸಹ, ಆರೋಪಿಗಳಿಗೆ ಸಹಾಯ ಮಾಡಲು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್. ವಕೀಲರಿಂದ ಆರೋಪಿತರ ಪರವಾಗಿ</u>

**12)** ನಾನು ನನ್ನ ಎಡಗೈ ಹೆಬ್ಬೆಟ್ಟಿನ ಗುರುತು ಹಾಕಿದ ದಾಖಲೆಗಳನ್ನು ಆಗಲೇ ಪೋಲೀಸರು ಬರೆದು ಇಟ್ಟಿದ್ದು, ನಾನು ಹೋದ ಮೇಲೆ ಅವುಗಳಿಗೆ ನನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ ಎಂದರೆ ಸರಿ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**03**
ಸಿ.ಡಬ್ಲೂ.**08**

ಸಾಕ್ಷಿದಾರರ ಹೆಸರು : ಹಣಮಂತಗೌಡ ಬಿರಾದಾರ.

ತಂದೆಯ ಹೆಸರು : ಭೀಮನಗೌಡ.

ವಯಸ್ಸು : 47 ವರ್ಷ.

ಉದ್ಯೋಗ : ಒಕ್ಕಲುತನ.

ವಾಸಸ್ಥಳ : ಹಲಗಣಿ, ತಾ: ಬಬಲೇಶ್ವರ.

**ಇಂದು ದಿನಾಂಕ 30-03-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ**

**1)** ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನಾನು ಈ ಹಿಂದೆ ಯಾವತ್ತೂ ನೋಡಿರುವುದಿಲ್ಲ. ಅವರ್ಯಾರೂ ನನಗೆ ಪರಿಚಯವಿರುವುದಿಲ್ಲ.

**2)** ನನಗೆ ಸಹಿ ಮಾಡಲು ಬರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯು 4 ನೇ ಆರೋಪಿತನು ಹಾಜರುಪಡಿಸಿದ ಮೋಟರ್ ಸೈಕಲ್ ಜಪ್ತಿ ಪಂಚನಾಮೆಯಾಗಿದ್ದು, ಅದನ್ನು ನಿಪಿ-7 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**3)** ನಾನು ನಿಪಿ-7 ಪಂಚನಾಮೆಗೆ ಅಂದಾಜು ಎರಡು ವರ್ಷಗಳ ಹಿಂದೆ ಬಬಲೇಶ್ವರ ಪೋಲೀಸ್ ಠಾಣೆಯಲ್ಲಿ ನನ್ನ ಸಹಿ ಮಾಡಿರುತ್ತೇನೆ. ಯಾವ ವಿಚಾರಕ್ಕಾಗಿ ಪೋಲೀಸರು ನನ್ನ ಸಹಿಯನ್ನು ನಿಪಿ-7 ಪಂಚನಾಮೆಗೆ

ಪಡೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ.

**4)** ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ಯಾವುದೇ ಮೋಟರ್ ಸೈಕಲ್ ಅನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಆದರೆ, ಒಂದು ಮೋಟರ್ ಸೈಕಲ್ ಹತ್ತಿರ ನಮ್ಮನ್ನು ನಿಲ್ಲಿಸಿ ಎರಡು ಪೋಟೋಗಳನ್ನು ತೆಗೆಸಿರುತ್ತಾರೆ.

**5)** ಸಾಕ್ಷಿಗೆ ಈಗ ಎರಡು ಪೋಟೋಗಳನ್ನು ತೋರಿಸಿದ್ದು, ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ಸದರಿ ಪೋಟೋಗಳನ್ನು ಕ್ರಮವಾಗಿ ನಿಪಿ-**8** ಮತ್ತು **9** ಎಂದು ಗುರುತಿಸಲಾಯಿತು. ಸದರಿ ನಿಪಿ-**8** ಮತ್ತು **9** ಪೋಟೋಗಳಲ್ಲಿ ಮೋಟರ್ ಸೈಕಲ್ ಅನ್ನು ತೋರಿಸುತ್ತಿರುವ ವ್ಯಕ್ತಿ ಈಗ ನ್ಯಾಯಾಲಯದ ಮುಂದೆ ಇರುವುದಿಲ್ಲ. ಸಾಕ್ಷಿ ಮುಂದುವರೆದು, ಸದರಿ ಪೋಟೋಗಳಲ್ಲಿ ಸದರಿ ವ್ಯಕ್ತಿ ಮಾಸ್ಕ್ ಹಾಕಿಕೊಂಡಿರುವುದರಿಂದ ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆ ವಿಷಯಗಳ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

**6)** ದಿನಾಂಕಃ **16-06-2020** ರಂದು ವಿಜಯಪುರದ ಡಿ.ವಾಯ್.ಎಸ್.ಪಿ. ಇವರು ನನಗೆ ಮತ್ತು ಚಾಸಾ-**9** ಇವರಿಗೆ ಬಬಲೇಶ್ವರ ಪೋಲೀಸ್ ಠಾಣೆಯ ಆವರಣಕ್ಕೆ ಕರೆಸಿ, ಅಲ್ಲಿ **4** ನೇ ಆರೋಪಿ ವಿಠ್ಠಲ ಚಲವಾದಿ ಈತನು, ಗುನ್ಹೆಗೆ ಉಪಯೋಗಿಸಿದ ಟಿವ್ಹಿಎಸ್ ಕಂಪನಿಯ ಮೋಟರ್ ಸೈಕಲ್ ನಂ.ಕೆಎ-**19**/ಎಸ್-**7032** ನೇದ್ದನ್ನು ಜಪ್ತಿಪಡಿಸಿಕೊಂಡು ಸದರಿ ಪಂಚನಾಮೆಯನ್ನು ಸಂಜೆ **4-45** ರಿಂದ **5-15** ಗಂಟೆವರೆಗೆ ನನ್ನ ಮತ್ತು ಚಾಸಾ-**9** ಇವರ ಸಮಕ್ಷಮ ನಿಪಿ-**7** ರಂತೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ನಿಪಿ-**8**

ಮತ್ತು 9 ರಂತೆ ಫೋಟೋಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ.

7) ಆರೋಪಿಗಳಿಗೆ ಸಹಾಯ ಮಾಡಲು ನಾನು ನಿಪಿ-7 ಪಂಚನಾಮೆಯಲ್ಲಿರುವ ವಿಷಯಗಳನ್ನು ಅಲ್ಲಗಳೆದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್. ವಕೀಲರಿಂದ ಆರೋಪಿತರ ಪರವಾಗಿ</u>

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.